2017 ಕ.ತೀ.ವ. 1251

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ಎಸ್. ಬೋಪಣ್ಣ

## ಅರ್‌ವಿಂದ್ ಕುಮಾರ್ –ವಿರುದ್ಧ– ಶ್ರೀಮತಿ ಶೀತಲ್ ವರ್ಮ*

**ಭಾರತ ಸಂವಿಧಾನದ 226 ಹಾಗೂ 227ನೇ ಅನುಚ್ಛೇದಗಳಡಿಯಲ್ಲಿ ರಿಟ್ ಅರ್ಜಿ.**

**ಹಿಂದೂ ವಿವಾಹ ಕಾಯಿದೆ, 1955 ಕಲಂ 26ರಡಿಯಲ್ಲಿ ಎದುರುದಾರರು ಸಲ್ಲಿಸಿದ ಮಧ್ಯಂತರ ಆದೇಶವನ್ನು ಪುರಸ್ಕರಿಸಿದ ಅಧಿವಿಚಾರಣಾ ನ್ಯಾಯಾಲಯದ ಆದೇಶ ಕ್ರಮವನ್ನು ಪ್ರಶ್ನಿಸಿ ಸದರಿ ರಿಟ್ ಅರ್ಜಿ.**

**ಕಾಯಿದೆಯ ಕಲಂ 13(1)(ia) ಹಾಗೂ (ib) ರಡಿಯಲ್ಲಿ ಪಕ್ಷಕಾರರು ಮಾಡಿಕೊಂಡ ಒಡಂಬಡಿಕೆಯನ್ನು ತ್ಯಜಿಸಲು ಯಾವುದೇ ಕಾರಣವಿಲ್ಲವೆಂದು ಅಭಿಪ್ರಾಯಪಟ್ಟ ಉಚ್ಛ ನ್ಯಾಯಾಲಯವು ಒಡಂಬಡಿಕೆಯ ಆಧಾರದ ಮೇಲೆ ಸೂಕ್ತ ತೀರ್ಪು ಮತ್ತು ಡಿಕ್ರಿಯನ್ನು ಹೊರಡಿಸುವಂತೆ ಅಧಿವಿಚಾರಣಾ ನ್ಯಾಯಾಲಯಕ್ಕೆ ಪ್ರಕರಣವನ್ನು ಹಿಂತಿರುಗಿಸಿ ಸದರಿ ರಿಟ್ ಅರ್ಜಿಯನ್ನು ಪುರಸ್ಕರಿಸಲಾಗಿದೆ.**

***ಉಲ್ಲೇಖಿಸಲಾದ ಮೊಕದ್ದಮೆಗಳು:*** ***ಪ್ಯಾರಾಗಳಲ್ಲಿ***

*1. ಐಎಲ್‌ಆರ್ 2010 ಕೆಎಆರ್ 1896*
*ಎನ್. ರಾಮಚಂದ್ರಪ್ಪ –ವಿರುದ್ಧ– ಎಂ. ಗೀತಾ (ಉಲ್ಲೇ) 5*

*2. ಡಬ್ಲ್ಯೂ.ಪಿ.ಸಂಖ್ಯೆ.51769/2016 ದಿನಾಂಕ 13.12.2016*
*ಪಿ.ಎಸ್. ಭೃಗು ದತ್ತ ಕೀರ್ತಿ –ವಿರುದ್ಧ– ದೀಪ್ತಿ ಕೆ.ಪಿ. (ಉಲ್ಲೇ) 5*

* ರಿಟ್ ಅರ್ಜಿ ಸಂ.18848/2016 (ಜಿಎಂ–ಎಫ್‌ಸಿ), ದಿನಾಂಕ: 7ನೇ ಫೆಬ್ರವರಿ, 2017.

*3. ಡಬ್ಲ್ಯೂ.ಪಿ. ಸಂಖ್ಯೆ: 32495/2016, ದಿ: 25.08.2016*
*ಸಂತೋಷ್ ವಿಜಯ್ ಕುಮಾರ್ –ವಿರುದ್ಧ–*
*ಕೋಕಿಲಾ ನಾರಾಯಣ್ (ಉಲ್ಲೇ) 7*
*4. ಎಐಆರ್ 2005 ಎಸ್‌ಸಿ 3353*
*ಸೇಲಂಅಡ್ವೋಕೇಟ್ ಬಾರ್ ಅಸೋಸಿಯೇಷನ್,*
*ತಮಿಳುನಾಡು –ವಿರುದ್ಧ– ಕೇಂದ್ರ ಸರ್ಕಾರ (ಉಲ್ಲೇ) 7*
*5. (2010) 10 ಎಸ್‌ಸಿಸಿ 222*
*ಸಂಜೀತ ದಾಸ್ –ವಿರುದ್ಧ– ತಪನ್ ಕುಮಾರ್ ಮೊಹಾಂತಿ*
*6. ಎಂಎಎನ್‌ಯು/ಎಸ್‌ಸಿ/1378/2015*
*ವಿನ್ನಾನ್‌ಗಾಟ್ ಅನುರಾಧ ಸಮೀರ್ –ವಿರುದ್ಧ–*
*ವಿನ್ನಾನ್‌ಗಾಟ್ ಮೋಹನ್‌ದಾಸ್ ಸಮೀರ್ (ಉಲ್ಲೇ) 8*

ಅರ್ಜಿದಾರರ ಪರವಾಗಿ : ಶ್ರೀ ನಾಗರಾಜ ರೆಡ್ಡಿ .ಡಿ – ವಕೀಲರು;
ಎದುರುದಾರರ ಪರವಾಗಿ: ಶ್ರೀಮತಿ ರಮ್ಯಾ ಆರ್ ಐಯ್ಯರ್, ವಕೀಲರು – ಪರವಾಗಿ ಶ್ರೀಮತಿ ಪ್ರಮೀಳಾ ನೇಸರ್ಗಿ, ಹಿರಿಯ ನ್ಯಾಯವಾದಿ.

## ಆಜ್ಞೆ

**ನ್ಯಾಯಮೂರ್ತಿ ಎ.ಎಸ್. ಬೋಪಣ್ಣ**

ಅರ್ಜಿದಾರನು, ಎಂ.ಸಿ. ಸಂ.2858/2013 ರಲ್ಲಿ ಮಧ್ಯಂತರ ಅರ್ಜಿ ಸಂ.2ರ ಮೇಲೆ ಮಾಡಿದ ದಿನಾಂಕ 02.01.2016ರ ಆದೇಶವನ್ನು ಟೀಕಿಸಿ ಈ ನ್ಯಾಯಾಲಯದ ಮುಂದೆ ಬಂದಿದ್ದಾನೆ. ಮಗುವಿನ ಜೀವನಾಂಶದ ಸಲುವಾಗಿ ಮದ್ಯಕಾಲೀನ ಜೀವನಾಂಶವನ್ನು ಕೋರಿ ಹಿಂದೂ ವಿವಾಹ ಅಧಿನಿಯಮದ 1955ರ (ಸಂಕ್ಷಿಪ್ತವಾಗಿ 'ಅಧಿನಿಯಮ' ಎಂದು ಉಲ್ಲೇಖಿಸಿದೆ) 26ನೇ ಪ್ರಕರಣದ ಅಡಿಯಲ್ಲಿ ದಾಖಲು ಮಾಡಿದ್ದ ಅರ್ಜಿಯನ್ನು ಪರಿಗಣಿಸಿ ಸದರಿ ಆದೇಶವನ್ನು ನೀಡಲಾಗಿತ್ತು.

2. ಕೆಳ ನ್ಯಾಯಾಲಯವು, ದಿನಾಂಕ 02.01.2016ರ ಆದೇಶ ಮೂಲಕ ಪ್ರತಿ ತಿಂಗಳು 5,000/- ರೂಪಾಯಿಗಳಂತೆ ಮಂಜೂರು ಮಾಡಿ ಸದರಿ ಅರ್ಜಿಯನ್ನು ವಿಲೇ ಮಾಡಿದೆ, ಅದನ್ನು ಇಲ್ಲಿ ಪ್ರಶ್ನಿಸಲಾಗಿದೆ. ಪ್ರಸಕ್ತ ಅರ್ಜಿಯಲ್ಲಿ, ಪಕ್ಷಕಾರರ ನಡುವಿನ ವಿವಾದದಲ್ಲಿ ಒಳಗೊಂಡಿರುವ ಸಮಗ್ರ ವಿವಾದಾಂಶದ ಟಿಪ್ಪಣಿಯನ್ನು ಗಮನಕ್ಕೆ ತೆಗೆದುಕೊಂಡು ಈ ನ್ಯಾಯಾಲಯ, ಮಧ್ಯಸ್ಥಿಕೆ ಮಾಡಬಹುದಾದ ಸ್ವರೂಪದ್ದೆಂದು ದಿನಾಂಕ 29.09.2016ರ ಆದೇಶದ ಮೂಲಕ ಬೆಂಗಳೂರು ಮಧ್ಯಸ್ಥಿಕೆ ಕೇಂದ್ರಕ್ಕೆ ಈ ಅರ್ಜಿಯನ್ನು ಹಿಂತಿರುಗಿಸಿದೆ. ಬೆಂಗಳೂರು ಮಧ್ಯಸ್ಥಿಕೆ ಕೇಂದ್ರದಲ್ಲಿ, ಅರ್ಜಿದಾರ ಮತ್ತು ಎದುರುದಾರರೊಂದಿಗೆ ಮಧ್ಯಸ್ಥಿಕೆದಾರನು ಅನೇಕ ಸುತ್ತುಗಳ ಚರ್ಚೆಯನ್ನು ನಡೆಸಿದ ತರುವಾಯ, ಮತ್ತು ಎಂ.ಸಿ. ಸಂ.2858/2013ರ ಅರ್ಜಿಯನ್ನಲ್ಲದೇ, ಜಿ ಮತ್ತು ಡಬ್ಲ್ಯೂಸಿ ಸಂ.150/2013ರಲ್ಲಿ ಮಗುವಿನ ರಕ್ಷಣೆಗೆ ಸಂಬಂಧಿಸಿದ ಅರ್ಜಿಯು, ಇತ್ಯರ್ಥದಲ್ಲಿರುವುದನ್ನು ಪರಿಗಣನೆಗೆ ತೆಗೆದುಕೊಂಡು, ಒಟ್ಟಾರೆ ಚರ್ಚೆಯನ್ನು ನಡೆಸಿ ಮತ್ತು ಎಲ್ಲಾ ವ್ಯಾಜ್ಯಗಳನ್ನು ಅಂತಿಮಗೊಳಿಸುವ ಸಲುವಾಗಿ ದಿನಾಂಕ 31.01.2017ರ ಇತ್ಯರ್ಥ ವಿವರಣ ಪತ್ರ ಮಾಡಿಕೊಳ್ಳಲಾಯಿತು. ಇತ್ಯರ್ಥದ ಸದರಿ ವಿವರಣಾ ಪತ್ರವನ್ನು, ಬೆಂಗಳೂರು ಮಧ್ಯಸ್ಥಿಕೆ ಕೇಂದ್ರದ ವರದಿಯೊಂದಿಗೆ ಈ ನ್ಯಾಯಾಲಯಕ್ಕೆ ವಿಲೇ ಮಾಡಲಾಗಿದೆ. ಈ ಸಂದರ್ಭದಲ್ಲಿ ಈ ಅರ್ಜಿಯನ್ನು ಪರಿಗಣಿಸುವುದಕ್ಕಾಗಿ ಈ ನ್ಯಾಯಾಲಯದ ಮುಂದೆ ಪಟ್ಟಿ ಮಾಡಲಾಗಿದೆ.

3. ಎಂ.ಸಿ. ಸಂ.2858/2013 ರಲ್ಲಿ ಮಾಡಿದ ಮಧ್ಯಕಾಲೀನ ಆದೇಶ ಮತ್ತು ಪಕ್ಷಕಾರರ ನಡುವೆ ಮಾಡಿಕೊಳ್ಳಲಾದ ಇತ್ಯರ್ಥದ ವಿವರಣಾ ಪತ್ರಕ್ಕೆ ಸಂಬಂಧಿಸಿದ ಪ್ರಸಕ್ತ ಪ್ರಕರಣವಾಗಿದ್ದರೂ, ಎಂ.ಸಿ. ಸಂ.2858/2013 ಮತ್ತು ಜಿ ಮತ್ತು ಡಬ್ಲ್ಯೂಸಿ ಸಂ.150/2013 ರಲ್ಲಿ ಪ್ರಮುಖ ವ್ಯವಹರಣೆಗಳಲ್ಲಿ ದಾಖಲಿಸಬಹುದು ಮತ್ತು ಸದರಿ ಉದ್ದೇಶಕ್ಕಾಗಿ, ವಿವರಣಾ ಪತ್ರವನ್ನು, ಕೆಳ ನ್ಯಾಯಾಲಯಕ್ಕೆ ವಿಲೇ ಮಾಡಬಹುದಾಗಿದ್ದು, ಇತ್ಯರ್ಥದ ವಿವರಣಾ ಪತ್ರವನ್ನು ಪರಿಗಣನೆಗೆ ತೆಗೆದುಕೊಳ್ಳಲು ಯುಕ್ತ ರೀತಿಯಲ್ಲಿನ ಕ್ರಮ ಜರುಗಿಸಲು ಕೌಟುಂಬಿಕ ನ್ಯಾಯಾಲಯವನ್ನು ಸಮರ್ಥಿಸುವುದಕ್ಕೆ ಪ್ರಸಕ್ತ ಅರ್ಜಿಯಲ್ಲಿನ ಹೆಚ್ಚಿನ

ಅಭಿಪ್ರಾಯೋಕ್ತಿಗಳನ್ನು ಮಾಡುವುದು ಸಹ ಅಗತ್ಯವಾಗಿದೆ ಮತ್ತು ಪಕ್ಷಕಾರರ ನಡುವೆ ಮಾಡಿಕೊಂಡ ಒಪ್ಪಂದದ ಅನುಸಾರವಾಗಿ ಈ ವಿಷಯವನ್ನು ವಿಲೇ ಮಾಡಲಾಗಿದೆ.

4. ಆರಂಭದಲ್ಲೇ ವಿಷಯದ ಈ ಅಂಶದ ಕಡೆ ಗಮನ ನೀಡುವಾಗ, ನಾನು, ಈ ನ್ಯಾಯಾಲಯದ ಮುಂದೆ ಖುದ್ದಾಗಿ ಹಾಜರಾದ ಅರ್ಜಿದಾರ ಮತ್ತು ಪ್ರತ್ಯರ್ಜಿದಾರರನ್ನು, ಅವರ ಸಂಪೂರ್ಣ ಸಮ್ಮತಿಯೊಂದಿಗೆ ಮಧ್ಯಸ್ಥಿಕೆ ಮತ್ತು ಇತ್ಯರ್ಥದ ವಿವರಣಾ ಪತ್ರದ ಪ್ರಕ್ರಿಯೆಗಳಲ್ಲಿ ಅವರು ವೈಯಕ್ತಿಕವಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆಯೇ ಎನ್ನುವುದನ್ನು ವಿಚಾರಣೆ ಮಾಡಿದ್ದೇನೆ. ಅವರು, ಅದನ್ನು ದೃಢೀಕರಿಸಿದ್ದಾರೆ ಮತ್ತು ಅವರು, ಇತ್ಯರ್ಥದ ವಿವರಣಾ ಪತ್ರದಲ್ಲಿರುವುದಕ್ಕೆ ಬದ್ಧರಾಗಿದ್ದಾರೆ. ಹಾಗೂ ಅದಕ್ಕನುಸಾರವಾಗಿ ಆದೇಶಗಳನ್ನು ಮಾಡಲು ಈ ನ್ಯಾಯಾಲಯವನ್ನು ಕೋರಿದ್ದಾರೆ.

5. ಈ ಸಂಬಂಧದಲ್ಲಿ ಪ್ರಸ್ತುತ ಸ್ವರೂಪದ ಇತ್ಯರ್ಥವನ್ನು ಪ್ರಮುಖ ವ್ಯವಹರಣೆಗಳ ಪ್ರಸ್ತುತ ವ್ಯಾಪ್ತಿಯಲ್ಲಿ ದಾಖಲಿಸಬಹುದೆ ಎಂಬುದನ್ನು ಸಹ ದೃಷ್ಟಿಯಲ್ಲಿಟ್ಟುಕೊಳ್ಳಬೇಕಾಗುತ್ತದೆ. ಅದಕ್ಕೆ ಸಂಬಂಧಪಟ್ಟಂತೆ, ***ಎನ್. ರಾಮಚಂದ್ರಪ್ಪ –ವಿರುದ್ಧ– ಎಂ. ಗೀತಾ***[1]ರ ಪ್ರಕರಣದಲ್ಲಿ ಪರಿಗಣನೆಗಾಗಿ ವಿವಾದಾಂಶವು ಉದ್ಭವಿಸಿರುವಾಗ, ಮಧ್ಯಸ್ಥಿಕೆಯ ತರುವಾಯ ಪಕ್ಷಕಾರರ ನಡುವೆ ಮಾಡಿಕೊಳ್ಳಲಾದ ಇತ್ಯರ್ಥದ ವಿವರಣಾ ಪತ್ರವನ್ನು ಈ ನ್ಯಾಯಾಲಯು ಪರಿಗಣನೆಗೆ ತೆಗೆದುಕೊಂಡಿರುವಾಗ, ಸಿಪಿಸಿಯ 89ನೇ ಪ್ರಕರಣ ಮತ್ತು ಮಧ್ಯಸ್ಥಿಕೆ ನಿಯಮಗಳಲ್ಲಿ ಸಹ ಒಳಗೊಂಡಿರುವ ಉಪಬಂಧವನ್ನು ವ್ಯಾಪಕವಾಗಿ ಉಲ್ಲೇಖಿಸಲಾಗಿದೆ ಮತ್ತು ಆ ಹಿನ್ನೆಲೆಯಲ್ಲಿ, ಪಕ್ಷಕಾರರ ನಡುವೆ ಮಾಡಿಕೊಳ್ಳಲಾದ ಇತ್ಯರ್ಥವನ್ನು ಅಂಗೀಕರಿಸಲಾಗಿದೆ ಮತ್ತು ಈ ನ್ಯಾಯಾಲಯ, ವಿವಾಹ ವಿಘಟನೆ ಸೇರಿದಂತೆ ಅಂತಿಮವಾಗಿ ಡಿಕ್ರಿಯನ್ನು ಮಂಜೂರು ಮಾಡಿ ಅದನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದೆಯೆಂಬ ನಿರ್ಣಯಕ್ಕೆ ಬರಲಾಗಿದೆಯೆಂದು ಅರ್ಜಿದಾರನ ಪರವಾಗಿ

1. ಐಎಲ್ಆರ್ 2010 ಕೆಎಆರ್ 1896

ಹಾಜರಾದ ಮಾನ್ಯ ನ್ಯಾಯವಾದಿ ಮತ್ತು ಎದುರುದಾರರ ಪರವಾಗಿ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿಗಳ ಮೂಲಕ ಈ ನ್ಯಾಯಾಲಯದ ಗಮನಕ್ಕೆ ತರಲಾಗಿದೆ. ***ಪಿ.ಎಸ್. ಭೃಗು ದತ್ತ ಕೀರ್ತಿ –ವಿರುದ್ಧ– ದೀಪ್ತಿ ಕೆ.ಪಿ.*** [2] ರ ಪ್ರಕರಣದಲ್ಲಿ ಈ ನ್ಯಾಯಾಲಯದ ಮಾನ್ಯ ನ್ಯಾಯಾಧೀಶರು, ಹೆಚ್ಚುವರಿ, ಪ್ರಧಾನ ನ್ಯಾಯಾಧೀಶರು, ಕೌಟುಂಬಿಕ ನ್ಯಾಯಾಲಯ ಮಾಡಿದ ಆದೇಶ ದಿನಾಂಕ 15.03.2016ರ ಟಿಪ್ಪಣಿಯನ್ನು ತೆಗೆದುಕೊಂಡಿರುವಾಗ, ಮಧ್ಯಸ್ಥಿಕೆ ಕೇಂದ್ರದ ಮುಂದೆ ಅದರಲ್ಲಿರುವಂತೆ ಮಾಡಿಕೊಂಡಿರುವ ಇತ್ಯರ್ಥದ ವಿವರಣಾ ಪತ್ರವನ್ನು, ಈ ಅಧಿನಿಯಮದ 13(1)(ia) ಪ್ರಕರಣದ ಮೇರೆಗೆ ದಾಖಲೆ ಮಾಡಿದ ಅರ್ಜಿಯಲ್ಲಿರುವಂತೆ ವಿವಾಹ ವಿಘಟನೆಯನ್ನು ತೃಪ್ತಿಕರವಾಗಿ ಸದರಿ ಉಪಬಂಧದಲ್ಲಿನ ಕಾರಣಗಳ ಹೊರತಾಗಿ ಮಂಜೂರು ಮಾಡಲಾಗದೇ, ಕೌಟುಂಬಿಕ ನ್ಯಾಯಾಲಯ ಮಾಡಿದ ಆದೇಶವನ್ನು ಅನುಮೋದಿಸಲಾಗಿದೆಯೆಂಬುದನ್ನು ಈ ನ್ಯಾಯಾಲಯದ ಗಮನಕ್ಕೆ ತರುವುದು ನ್ಯಾಯಯುತವಾಗಿದೆಯೆಂದು ಮಾನ್ಯ ಹಿರಿಯ ನ್ಯಾಯವಾದಿಯು ಸಹ ವಾದಿಸಿದ್ದಾರೆ. ಆ ದೃಷ್ಟಿಯಿಂದ, ಆದೇಶದಲ್ಲಿರುವ ಲೋಪಗಳನ್ನು ಸರಿಪಡಿಸುವುದು ಮತ್ತು ಈ ಸ್ಥಿತಿಯನ್ನು ಸ್ಪಷ್ಟಪಡಿಸುವುದು ಸಹ ಅಗತ್ಯವಾಗಿದೆ.

7. ಆ ಹಿನ್ನೆಲೆಯಲ್ಲಿ, (ಮೇಲೆ ಹೇಳಲಾದ) ***ಪಿ.ಎಸ್. ಭೃಗು ದತ್ತ ಕೀರ್ತಿ*** ಪ್ರಕರಣದಲ್ಲಿ ಸದರಿ ಆದೇಶವನ್ನು ಪರಿಶೀಲಿಸಿದ್ದು, ಮಾನ್ಯ ನ್ಯಾಯಾಧೀಶರು, ಅದರಲ್ಲಿರುವಂತೆ ಉಲ್ಲೇಖಿಸಿದ್ದು, ಕೌಟುಂಬಿಕ ನ್ಯಾಯಾಲಯ, ಮಾನ್ಯ ಸರ್ವೋಚ್ಛ ನ್ಯಾಯಾಲಯದ ತೀರ್ಮಾನಗಳನ್ನು ಉಲ್ಲೇಖಿಸಿದ್ದಾರೆ ಎಂಬುದನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ ಎಂಬುದನ್ನು ಬಹಿರಂಗ ಪಡಿಸಲಾಗಿದೆ ಮತ್ತು ಆ ಹಿನ್ನೆಲೆಯಲ್ಲಿ ಮಾನ್ಯ ನ್ಯಾಯವಾದಿಯು, ಈ ಸ್ಥಿತಿಯ ವಾದವನ್ನು ಅಸಮರ್ಥವೆಂದು ದಾಖಲಿಸುವುದರ ಮೂಲಕ ಕೌಟುಂಬಿಕ ನ್ಯಾಯಾಲಯದ ಆದೇಶವನ್ನು ಅನುಮೋದಿಸಲಾಗಿದೆ ಎಂಬುದು ಸಂದೇಹವಾಗುವುದಿಲ್ಲ. ಸದರಿ ಅಂಶದ

2. ಡಬ್ಲ್ಯೂ.ಪಿ.ಸಂಖ್ಯೆ.51769/2016 ದಿನಾಂಕ 13.12.2016

ಟಿಪ್ಪಣಿಯನ್ನು ತೆಗೆದುಕೊಳ್ಳುವಾಗ, ***ಸಂತೋಷ್ ವಿಜಯ್ ಕುಮಾರ್ –ವಿರುದ್ಧ– ಕೋಕಿಲಾ ನಾರಾಯಣ್*** [3] ರ ಪ್ರಕರಣ ಸೇರಿದಂತೆ ವಿವಿಧ ಪ್ರಕರಣಗಳಲ್ಲಿ ಈ ನ್ಯಾಯಾಲಯದ, ಆದೇಶಕ್ಕೆ ಮುಂಚಿನ ಅಭಿಪ್ರಾಯವನ್ನು ಸಹ ಗಮನದಲ್ಲಿಟ್ಟುಕೊಂಡು, (ಮೇಲೆ ಹೇಳಲಾದ) ***ಎನ್. ರಾಮಚಂದ್ರಪ್ಪ ಪ್ರಕರಣ***ದಲ್ಲಿ ಈ ನ್ಯಾಯಾಲಯದ ಮುಂಚಿನ ತೀರ್ಮಾನದ ಟಿಪ್ಪಣಿಯನ್ನು ತೆಗೆದುಕೊಂಡಿದೆ ಮತ್ತು ವಿವಾಹ ವಿಘಟನೆಯ ಅಂಥದೇ ಇತ್ಯರ್ಥ ಪತ್ರವನ್ನು ಅಂಗೀಕರಿಸಿ ಕೌಟುಂಬಿಕ ನ್ಯಾಯಾಲಯಕ್ಕೆ ನಿರ್ದೇಶಿಸಿ ಅದನ್ನು ಅನುಸರಿಸಲಾಗಿದೆ. ಆದಾಗ್ಯೂ, ಆರಂಭದಲ್ಲಿ, (ಮೇಲೆ ಹೇಳಲಾದ) ***ಪಿ.ಎಸ್. ಭೃಗು ದತ್ತ ಕೀರ್ತಿ ಪ್ರಕರಣ***ದಲ್ಲಿ ಮಾಡಿದ ಆದೇಶವನ್ನು ಈ ನ್ಯಾಯಾಲಯ ಮಾಡಿದ ಮುಂಚಿನ ಆದೇಶಗಳೊಂದಿಗೆ ಉಲ್ಲೇಖಿಸದೆ, ***ಎನ್. ರಾಮಚಂದ್ರಪ್ಪ ಪ್ರಕರಣ***ದಲ್ಲಿ ಆದೇಶವನ್ನು ಹೆಚ್ಚು ನಿರ್ದಿಷ್ಟವಾಗಿ ಅದಲ್ಲಿರುವಂತೆ ಈ ನ್ಯಾಯಾಲಯದ ಮಾನ್ಯ ನ್ಯಾಯಾಧೀಶರು, ಸಹ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಮಾನಗಳನ್ನು ಪರಿಗಣನೆಗೆ ತೆಗೆದುಕೊಂಡಿದ್ದು, ಅದು ವಿಭಿನ್ನವಾಗಿದೆ ಮತ್ತು ಹಾಗೇ ಮಾಡಿರುವಾಗ, ಮಾನ್ಯ ನ್ಯಾಯಾಧೀಶರ ಅಭಿಪ್ರಾಯದಂತೆ ಅನುಸರಿಸಲಾಗಿದೆ ಮತ್ತು ***ಸೇಲಂ–ಅಡ್ವೋಕೇಟ್ ಬಾರ್ ಅಸೋಸಿಯೇಷನ್, ತಮಿಳುನಾಡು –ವಿರುದ್ಧ– ಕೇಂದ್ರ ಸರ್ಕಾರ*** [4] ರ ಪ್ರಕರಣದಲ್ಲಿನ ತೀರ್ಮಾನದ ಮೇಲೆ ಅವಲಂಬಿಸಿದ್ದು, ಅದರಲ್ಲಿರುವಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯ ಸಿವಿಲ್ ಪ್ರಕ್ರಿಯಾ ಸಂಹಿತೆಯ ತಿದ್ದುಪಡಿಗೆ ಸಂಬಂಧಿಸಿದ ಎಲ್ಲಾ ಅಂಶಗಳಿಗೆ ಸಂಬಂಧಿಸಿದಂತೆ ವಿವರವಾದ ಪರಿಗಣನೆ ಮಾಡಿದೆ ಮತ್ತು ಅದಕ್ಕೆ ಸಂಬಂಧಪಟ್ಟಂತೆ, ಸಿಪಿಸಿಯ 89ನೇ ಪ್ರಕರಣದ ವ್ಯಾಪ್ತಿಗೆ ಸಂಬಂಧಿಸಿದ ಪರಿಗಣನೆಯನ್ನು ಸಹ ಮಾಡಲಾಗಿದೆ ಎಂಬುದನ್ನು ಕಾಣಬಹುದು.

8. ಆದ್ದರಿಂದ, ಸದರಿ ಹಿನ್ನೆಲೆಯಲ್ಲಿ, ***ಸಂಜೀತ ದಾಸ್ –ವಿರುದ್ಧ– ತಪನ್ ಕುಮಾರ್ ಮೊಹಾಂತಿ*** [5] ಮತ್ತು ***ವಿನ್ನಾನ್‌ಗಾಟ್ ಅನುರಾಧ ಸಮೀರ್ –ವಿರುದ್ಧ– ವಿನ್ನಾನ್‌ಗಾಟ್ ಮೋಹನ್ ದಾಸ್ ಸಮೀರ್*** [6] ರ ಪ್ರಕರಣದಲ್ಲಿನ ತೀರ್ಮಾನವನ್ನು

3.ಡಬ್ಲ್ಯೂಪಿ ಸಂ.32495/2016 ದಿನಾಂಕ:25.08.2016 4.ಎಐಆರ್ 2005 ಎಸ್‌ಸಿ 3353
5. (2010) 10 ಎಸ್‌ಸಿಸಿ 222 6. ಎಂಎಎನ್‌ಯು/ಎಸ್‌ಸಿ/1378/2015

ಸಹ ಕೌಟುಂಬಿಕ ನ್ಯಾಯಾಲಯುವು ಅವಲಂಬಿಸಿದೆ ಮತ್ತು ಮೇಲೆ ಹೇಳಲಾದ ***ಪಿ.ಎಸ್. ಭೃಗು ದತ್ತ ಕೀರ್ತಿ***ಯಲ್ಲಿರುವಂತೆ ಅನುಮೋದಿಸಲಾಗಿದ್ದು, ಆ ಅಭಿಪ್ರಾಯವನ್ನಿಟ್ಟುಕೊಂಡು, ಸದರಿ ತೀರ್ಮಾನಗಳನ್ನು ಸಿಪಿಸಿಯ 89ನೇ ಪ್ರಕರಣದ ಅಡಿಯಲ್ಲಿ ಮಾಡಲಾದ, ಅದರಲ್ಲಿರುವ ಉಲ್ಲೇಖದ ವಿಷಯಗಳಿಗೆ ಸಂಬಂಧಿಸಿದಂತೆ ಪರ್ಯಾಲೋಚಿಸಿ ಈ ಮುಂಚಿನಂತೆ ಪರಿಗಣಿಸಲಾಗದು ಮತ್ತು ಇತ್ಯರ್ಥವನ್ನು ಮಧ್ಯಸ್ಥಿಕೆ ನಿಯಮಗಳ ಉಪಬಂಧಗಳನ್ನು ಗಮನದಲ್ಲಿಟ್ಟುಕೊಂಡು ಮಾಡಲಾಗಿದೆ. (ಮೇಲೆ ಹೇಳಲಾದ) ***ವಿನ್ನಾನ್‌ಗಾಟ್ ಅನುರಾಧ ಸಮೀರ್ ಪ್ರಕರಣ***ದಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯ ಅದರಲ್ಲಿರುವ ಪರಿಸ್ಥಿತಿಯನ್ನು, ವಾದಕಾಲೀನ ಜೀವನಾಂಶವನ್ನು ಸ್ವೀಕರಿಸಲು ಪತ್ನಿಯು ನೀಡಿದ ಸಮ್ಮತಿಯಷ್ಟರ ಮಟ್ಟಿಗೆ ತಿಳಿದುಕೊಂಡಿರಬಹುದಾದ ಒಪ್ಪಂದವನ್ನು ನಿರ್ಣಯಿಸಿಲ್ಲ ಮತ್ತು ವಿಚ್ಛೇಧನಕ್ಕಾಗಿ ಒಪ್ಪಿದ್ದು, ಪರಿಗಣಿಸುವುದು ಅಗತ್ಯವಾಗಿದೆ. ಆ ದೃಷ್ಟಿಯಿಂದ, ಉಚಿತ ಸಮ್ಮತಿಯಂತೆ ಭಾವಿಸಲಾಗದು. ಈ ಪ್ರಕರಣದಲ್ಲಿ ನ್ಯಾಯಾಲಯ, ಪತ್ನಿಯು, ಕಾಯಿಲೆ ಇರುವಂತೆ ದೃಢವಾಗಿ ಹೇಳಿದ್ದನ್ನು ಪರಿಗಣಿಸಿದರೆ ವಿಶಿಷ್ಟ ಸಂಗತಿಗಳಂತೆ, ಪಕ್ಷಕಾರರ ನಡುವೆ ಮಾಡಿಕೊಳ್ಳಲಾಗಿದೆ ಮತ್ತು ಆಕೆಯು ಕಾಯಿಲೆ ಇರುವಂತೆ ಅನಾನುಕೂಲವಾಗಿ ಟಿಪ್ಪಣಿ ಮಾಡಲಾಗಿದೆಯೆಂಬ ಅದೇ ಇತ್ಯರ್ಥವು ತೃಪ್ತಿಕರವಾಗಿಲ್ಲವೆಂಬ ಸಂಗತಿಯಂತೆ ಅಭಿಪ್ರಾಯಪಟ್ಟಿದೆ. ಮೇಲೆ ಹೇಳಲಾದ ***ಸಂಜೀತರಾವ್ ಪ್ರಕರಣ***ದಲ್ಲಿ ಅ ಪರಿಸ್ಥಿತಿಯಲ್ಲಿ ಉಚ್ಚ ನ್ಯಾಯಾಲಯ, ಶಪಥ ಪತ್ರವನ್ನು ಅಂಗೀಕರಿಸಲಾಗಿದೆ ಮತ್ತು ಮಾಡಿದ ಆದೇಶವನ್ನು ಮಾನ್ಯ ಸರ್ವೋಚ್ಛ ನ್ಯಾಯಾಲಯದ ಮುಂದೆ ಪಕ್ಷಕಾರರಲ್ಲಿ ಒಬ್ಬರು ಪ್ರಶ್ನಿಸಿದ್ದಾರೆ. ಆದ್ದರಿಂದ, ಸಿಪಿಸಿಯ 89ನೇ ಪ್ರಕರಣದ ಉಪಬಂಧಗಳು, ಆ ಸಂದರ್ಭಕ್ಕೆ ಅನ್ವಯಿಸುವುದಿಲ್ಲವೆಂದು ಕೋರಿದ್ದಾರೆ ಮತ್ತು ಪಕ್ಷಕಾರರ ನಡುವಿನ ಇತ್ಯರ್ಥವನ್ನನುಸರಿಸಿ, ಉಭಯ ಪಕ್ಷಕಾರರು ಸಹಿ ಮಾಡಿ ವಿವರಣಾ ಪತ್ರ, ಈ ನ್ಯಾಯಾಲಯದ ಮುಂದೆ ಲಭ್ಯವಿದೆ ಮತ್ತು ಆದಾಗ್ಯೂ ಇದನ್ನು ಅಂಗೀಕರಿಸಲಾಗದು.

9. ಪ್ರಸ್ತುತ ಸಂಗತಿಗಳಂತೆ, ಮಧ್ಯಸ್ಥಿಕೆ ಮೂಲಕ ವಿವರಣಾ ಪತ್ರವನ್ನು, ಮಾಡಿಕೊಂಡಿರುವಾಗ ಮತ್ತು ಈ ಅರ್ಜಿಯನ್ನು ಈ ನ್ಯಾಯಾಲಯದ ಮುಂದೆ ಕೈಗೆತ್ತಿಕೊಳ್ಳಲಾಗಿದ್ದು, ಉಭಯ ಪಕ್ಷಕಾರರು ಇತ್ಯರ್ಥಕ್ಕೆ ಬದ್ಧರಾಗಿದ್ದು, 13(1)/ia)

ಮತ್ತು (ib) ಪ್ರಕರಣದಡಿಯಲ್ಲಿ ಅರ್ಜಿಯಲ್ಲಿರುವಂತೆ ಮಾಡಿಕೊಳ್ಳಲಾಗಿದ್ದರೂ ಅಂಥ ಇತ್ಯರ್ಥದ ಕಾರಣವನ್ನು ನಿರಾಕರಿಸಲಾಗದು ಮತ್ತು ವಿವಾಹ ವಿಘಟನೆಗಾಗಿನ ಪರಿಗಣನೆಯನ್ನು, ಪಕ್ಷಕಾರರು ಇತ್ಯರ್ಥ ಪತ್ರದ ಅನುಸಾರ ಮಾಡಲಾಗಿದೆ. ಈ ನ್ಯಾಯಾಲಯವು ಮಾಡಬಹುದಾದ ಉತ್ತಮವಾದುದೆಂದರೆ ಇತ್ಯರ್ಥ ಪತ್ರದಲ್ಲಿ ಒಪ್ಪಿರುವ ಷರತ್ತುಗಳು ಕಾನೂನು ಬಾಹಿರ, ಅನ್ಯಾಯ ಅಥವಾ ಸಾರ್ವಜನಿಕ ನೀತಿಗೆ ವಿರೋಧವಾಗಿವೆಯೇ ಎಂಬುದಾಗಿದೆ. ಆ ಪರೀಕ್ಷೆಯು ತೃಪ್ತಿಕರವಾಗಿದ್ದಲ್ಲಿ, ಮತ್ತು ಪಕ್ಷಕಾರರು ಇತ್ಯರ್ಥ ಪತ್ರದ ಷರತ್ತುಗಳನ್ನು ದೃಢೀಕರಿಸಿದಲ್ಲಿ, ಅದನ್ನು ಒಪ್ಪಿಕೊಳ್ಳಲು ಅಗತ್ಯಪಡಿಸಬೇಕಾಗುತ್ತದೆ ಮತ್ತು ಇತ್ಯರ್ಥಪತ್ರದ ನಿಬಂಧನೆಗಳಿಗನುಸಾರವಾಗಿ ವ್ಯವಹರಣೆಗಳನ್ನು ಮುಕ್ತಾಯಗೊಳಿಸಬೇಕಾಗುತ್ತದೆ.

10. ಆದ್ದರಿಂದ, ಸದರಿ ಸಂದರ್ಭಗಳಲ್ಲಿ, ಕೆಳ ನ್ಯಾಯಾಲಯ, ಅವರು ಇತ್ಯರ್ಥ ಪತ್ರಕ್ಕೆ ಬದ್ಧರಾಗಿದ್ದಾರೆಯೆ, ಎಂಬುದನ್ನು ಮತ್ತೊಮ್ಮೆ ಅರ್ಜಿದಾರ ಮತ್ತು ಎದುರುದಾರರಿಂದ ಖಚಿತ ಪಡಿಸಿಕೊಳ್ಳುವುದು ಮತ್ತು ಅವರು ಅದೇ ಸಮ್ಮತಿಯನ್ನು ನೀಡಿದಲ್ಲಿ, ಕೆಳ ನ್ಯಾಯಾಲಯ, ಪಕ್ಷಕಾರರ ನಡುವೆ ಮಾಡಿಕೊಳ್ಳಲಾದ ಇತ್ಯರ್ಥ ಪತ್ರದ ಷರತ್ತುಗಳಲ್ಲಿರುವಂತೆ ತೀರ್ಪನ್ನು ಹೊರಡಿಸತಕ್ಕದ್ದು.

11. ಬೆಂಗಳೂರು ಮಧ್ಯಸ್ಥಿಕೆ ಕೇಂದ್ರದ ವರದಿಯನ್ನು ಮತ್ತು ಪಕ್ಷಕಾರರ ನಡುವೆ ಮಾಡಿಕೊಳ್ಳಲಾದ ಇತ್ಯರ್ಥ ಪತ್ರದ ವಿವರಣಾ ಪತ್ರವನ್ನು 6ನೇ ಹೆಚ್ಚುವರಿ ಪ್ರಧಾನ ಕೌಟುಂಬಿಕ ನ್ಯಾಯಾಧೀಶರು ಬೆಂಗಳೂರು ಇವರಿಗೆ, ಮೇಲೆ ಸೂಚಿಸಲಾದಂಥ ರೀತಿಯಲ್ಲಿ ಅದನ್ನು ದಾಖಲಿಸಲು ಮತ್ತು ಪಕ್ಷಕಾರರ ನಡುವೆ ಮಾಡಿಕೊಳ್ಳಲಾದ ಇತ್ಯರ್ಥ ಪತ್ರದ ಷರತ್ತುಗಳಲ್ಲಿರುವಂತೆ ತೀರ್ಪು ಮತ್ತು ಡಿಕ್ರಿಯನ್ನು ಹೊರಡಿಸಲು ವಿಲೇ ಮಾಡಲು ರಿಜಿಸ್ಟ್ರಿಗೆ ನಿರ್ದೇಶಿಸಲಾಗಿದೆ.

ಈ ಅಭಿಪ್ರಾಯೋಕ್ತಿಗಳು ಮತ್ತು ನಿರ್ದೇಶನಗಳೊಂದಿಗೆ ಈ ಅರ್ಜಿಯನ್ನು ವಿಲೇ ಮಾಡಲಾಗಿದೆ.

---